**ಸರ್ವೋಚ್ಚ ನ್ಯಾಯಾಲಯ**

**ಕ್ರಿಮಿನಲ್ ಅಧಿಕಾರ ವ್ಯಾಪ್ತಿ**
**ಕ್ರಿಮಿನಲ್ ಅಪೀಲು ಸಂಖ್ಯೆ: 141/2020**

ಶ್ಯಾಮಲಾಲ್ ದೇವ್ಡಾ ಹಾಗೂ ಇತರರು –ವಿರುದ್ಧ– ಪರಿಮಳ

**ತೀರ್ಪು**

**ನ್ಯಾಯಮೂರ್ತಿ ಶ್ರೀಮತಿ ಆರ್. ಭಾನುಮತಿ:**

1. ಅನುಮತಿ ನೀಡಲಾಗಿದೆ.

2. ಈ ಅಪೀಲನ್ನು, ಗೃಹ ಸಂಬಂಧಿ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 (ಸಂಕ್ಷಿಪ್ತತೆಗಾಗಿ "ಗೃಹ ಸಂಬಂಧಿ ಹಿಂಸೆ ಅಧಿನಿಯಮ" ಎಂದು ಕರೆಯಲಾಗಿದೆ)ರ 18, 19 ಹಾಗೂ 20ನೇ ಪ್ರಕರಣಗಳಡಿಯಲ್ಲಿ ಪ್ರತ್ಯರ್ಜಿದಾರರು ಸಲ್ಲಿಸಿದ ದೂರನ್ನು ಪುರಸ್ಕರಿಸಲು ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್, ಬೆಂಗಳೂರು ಇವರು ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತಾರೆಂದು ಅಭಿಪ್ರಾಯಪಟ್ಟು ಅಪೀಲುದಾರರು ಸಲ್ಲಿಸಿದ ಅರ್ಜಿಯನ್ನು ಉಚ್ಚ ನ್ಯಾಯಾಲಯವು ವಜಾ ಮಾಡುವ ಮೂಲಕ ಕ್ರಿಮಿನಲ್ ಅರ್ಜಿ ಸಂಖ್ಯೆ: 5959/2015ರಲ್ಲಿ ಬೆಂಗಳೂರಿನಲ್ಲಿನ ಉಚ್ಚ ನ್ಯಾಯಾಲಯವು ಹೊರಡಿಸಿದ ದಿನಾಂಕ: 18.02.2019ರ ಪ್ರಶ್ನಿತ ತೀರ್ಪಿನಿಂದ ಸಲ್ಲಿಸಿರುತ್ತಾರೆ.

3. ಈ ಅಪೀಲನ್ನು ಸಲ್ಲಿಸುವಂಥ ಸಂಕ್ಷಿಪ್ತ ವಾಸ್ತವಾಂಶಗಳು ಈ ಮುಂದಿನಂತಿರುತ್ತವೆ:

ಪ್ರತ್ಯರ್ಜಿದಾರಳಾದ – ಪತ್ನಿ ಹಾಗೂ ಅಪೀಲುದಾರ ಸಂಖ್ಯೆ: 14 ಮನೋಜ್ ಕುಮಾರ್ ರವರುಗಳ ವಿವಾಹವನ್ನು ರಾಜಾಸ್ಥಾನದಲ್ಲಿನ ಹಿಂದೂ ಸಂಪ್ರದಾಯ ಹಾಗೂ ಆಚರಣೆಗಳ ಪ್ರಕಾರ ದಿನಾಂಕ 01.05.2006ರಂದು ವಿಧಿವತ್ತಾಗೆ ನಡೆಸಲಾಗಿತ್ತು. ವಿವಾಹದ ತರುವಾಯ, ಪ್ರತ್ಯರ್ಜಿದಾರಳು, ಅಪೀಲುದಾರ ಸಂಖ್ಯೆ: 14ರ ತಂದೆ ತಾಯಿಗಳಾದಂಥ ಅಪೀಲುದಾರ ಸಂಖ್ಯೆ: 1 ಹಾಗೂ 2 ರವರುಗಳೊಂದಿಗೆ ಚೆನ್ನೈನಲ್ಲಿ ಆಕೆಯ ಪತಿಯ ಮನೆಯಲ್ಲಿಯೇ ಅಪೀಲುದಾರ ಸಂಖ್ಯೆ: 14ರೊಂದಿಗೆ

ನೆಲೆಸಿರುತ್ತಾಳೆ. 2014ರ ಏಪ್ರಿಲ್‌ನಲ್ಲಿ ಅಪೀಲುದಾರ ಸಂಖ್ಯೆ: 14 ಹಾಗೂ ಪ್ರತ್ಯರ್ಜಿದಾರಳಾದ ಪತ್ನಿ, ಪ್ರತ್ಯರ್ಜಿದಾರಳ ಸಹೋದರಿಯ ವಿವಾಹಕ್ಕೆ ಚೆನ್ನೈಯಿಂದ ಬೆಂಗಳೂರಿಗೆ ಹೋಗುತ್ತಾರೆ. ಸದರಿ ವಿವಾಹವಾದ ತರುವಾಯ, ಪ್ರತ್ಯರ್ಜಿದಾರಳು ತಾನು ಇನ್ನೂ ಸ್ವಲ್ಪ ದಿವಸಗಳ ಕಾಲ ಬೆಂಗಳೂರಿನಲ್ಲಿ ಉಳಿದುಕೊಳ್ಳುತ್ತೇನೆಂಬ ತನ್ನ ಅಪೇಕ್ಷೆಯನ್ನು ವ್ಯಕ್ತಪಡಿಸಿರುತ್ತಾಳೆ. ಇದಕ್ಕೆ ಅಪೀಲುದಾರ ಸಂಖ್ಯೆ: 14 ಪತ್ನಿ ಸ್ವಲ್ಪ ದಿವಸಗಳ ಕಾಲ ತನ್ನ ತಂದೆ–ತಾಯಿಯ ಮನೆಯಲ್ಲಿ ಉಳಿದುಕೊಳ್ಳಲು ಇಚ್ಛಿಸುತ್ತಿದ್ದಾಳೆಂದು ಅರ್ಥೈಸಿಕೊಂಡು ಸಮ್ಮತಿಸುತ್ತಾನೆ. ಆ ತರುವಾಯ ಅಪೀಲುದಾರನ ಪ್ರಕಾರ, ಪ್ರತ್ಯರ್ಜಿದಾರಳು ತನ್ನ ಪತಿಯ ಮನೆಗೆ ಹಿಂತಿರುಗಲು ಅಥವಾ ಅಪೀಲುದಾರ ಸಂಖ್ಯೆ: 14ನೊಂದಿಗೆ ಸಹ–ಜೀವನ ನಡೆಸಲು ನಿರಾಕರಿಸಿರುತ್ತಾಳೆ. ಆಗ ಅಪೀಲುದಾರ ಸಂಖ್ಯೆ: 14, ಚೆನ್ನೈನ ಕೌಟುಂಬಿಕ ನ್ಯಾಯಾಲಯದ ಎದುರು ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗಾಗಿ ಹಿಂದೂ ವಿವಾಹ ಅಧಿನಿಯಮದ 9ನೇ ಪ್ರಕರಣದಡಿಯಲ್ಲಿ ಒ.ಪಿ.ಸಂಖ್ಯೆ: 11355/2015 ನ್ನು ಸಲ್ಲಿಸಿರುತ್ತಾನೆ. ಆ ತರುವಾಯ, ಪ್ರತ್ಯರ್ಜಿದಾರಳು ತಾನು ಗೃಹ ಸಂಬಂಧಿ ಹಿಂಸೆಯ ಬಲಿಪಶುವಾಗಿದ್ದೇನೆಂದು, ತನ್ನ ಪತಿ – ಅಪೀಲುದಾರ ಸಂಖ್ಯೆ: 14, ತನ್ನ ಅತ್ತೆ–ಮಾವಂದಿರಾದ ಅಪೀಲುದಾರ ಸಂಖ್ಯೆ: 1 ಹಾಗೂ 2 ಹಾಗೂ ಚೆನ್ನೈ, ರಾಜಾಸ್ಥಾನ್ ಹಾಗೂ ಗುಜರಾತ್‌ಗಳಲ್ಲಿರುವಂಥ ಆಕೆಯ ಪತಿಯ ಸಂಬಂಧಿಕರುಗಳ ವಿರುದ್ಧ ಬೆಂಗಳೂರಿನಲ್ಲಿನ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರ ನ್ಯಾಯಾಲಯದ ಎದುರು ಕ್ರಿಮಿನಲ್ ಸಂಕೀರ್ಣ ಅ.ಸಂಖ್ಯೆ: 2015ರ 53ನ್ನು ಅಧಿನಿಯಮದ 18ನೇ ಪ್ರಕರಣದಡಿಯಲ್ಲಿ ರಕ್ಷಣೆಯ ಆದೇಶ ಹಾಗೂ 19ನೇ ಪ್ರಕರಣದಡಿಯಲ್ಲಿ ನಿವಾಸದ ಆದೇಶ ಹಾಗೂ 20ನೇ ಪ್ರಕರಣದಡಿಯಲ್ಲಿ; ಹಣಕಾಸು ಪರಿಹಾರವನ್ನು ಕ್ಲೇಮು ಮಾಡಿ, ಸಲ್ಲಿಸಿರುತ್ತಾಳೆ. ಬೆಂಗಳೂರಿನ ಮಾನ್ಯ ಮ್ಯಾಜಿಸ್ಟ್ರೇಟರು, ದಿನಾಂಕ: 16.04.2015ರಂದಿನ ಆದೇಶದ ಮೇರೆಗೆ ಗೃಹ ಸಂಬಂಧಿ ಹಿಂಸೆಯ ಅಧಿನಿಯಮದ 27ನೇ ಪ್ರಕರಣದಡಿಯಲ್ಲಿ ಪ್ರತ್ಯರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸುವ ಅಧಿಕಾರ ವ್ಯಾಪ್ತಿಯನ್ನು ಹೊಂದಿದೆಯೆಂದು ಅಭಿಪ್ರಾಯದ ಮೂಲಕ ಅಪೀಲುದಾರರಿಗೆ ನೋಟೀಸನ್ನು ನೀಡಿರುತ್ತದೆ.

4. ಕ್ರಿಮಿನಲ್ ಸಂಕೀರ್ಣ ಅಪೀಲು ಸಂಖ್ಯೆ: 53/2015ರ ಸಮನುಗಳನ್ನು ನೀಡುವ ಮೂಲಕ ಬಾಧಿತರಾದ ಅಪೀಲುದಾರರು, ಬೆಂಗಳೂರಿನಲ್ಲಿನ ಎಂ.ಎಂ.ಟಿ.ಸಿ –VI ರ ಕಡತದ ಮೇಲೆ ಕ್ರಿಮಿನಲ್ ಸಂಕೀರ್ಣ ಅಪೀಲು ಸಂಖ್ಯೆ: 2015ರ 53ರಲ್ಲಿನ ಇಡೀ ವ್ಯವಹರಣೆಗಳನ್ನು ರದ್ದುಪಡಿಸಲು ಕೋರಿ ಉಚ್ಚ ನ್ಯಾಯಾಲಯದ ಎದುರು ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪ್ರಶ್ನಿತ ತೀರ್ಪಿನ ಮೇರೆಗೆ, ಪ್ರತ್ಯರ್ಜಿದಾರರು ಸಲ್ಲಿಸಿರುವ ದೂರಿನಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಎಂದರೆ, ಚೆನ್ನೈ, ರಾಜಾಸ್ಥಾನ್ ಹಾಗೂ ಗುಜರಾತ್‌ಗಳಲ್ಲಿ ಗೃಹ ಸಂಬಂಧಿ ಹಿಂಸೆಯ ಹಲವಾರು ಘಟನೆಗಳನ್ನು ನಿರೂಪಿಸಿರುವುದರಿಂದ ಬೆಂಗಳೂರಿನಲ್ಲಿ ದಾಖಲಿಸಿದ ದೂರು ಗೃಹಸಂಬಂಧಿ ಹಿಂಸೆಯ ಅಧಿನಿಯಮದ 27ನೇ ಪ್ರಕರಣದಡಿಯಲ್ಲಿ ಊರ್ಜಿತವಾಗಿರುತ್ತದೆಂದು ಅಭಿಪ್ರಾಯಪಡುವ ಮೂಲಕ ಅರ್ಜಿಯನ್ನು ಉಚ್ಚ ನ್ಯಾಯಾಲಯವು ವಜಾಗೊಳಿಸಿರುತ್ತದೆ. ಇದರಿಂದ ಬಾಧಿತರಾದ ಅಪೀಲುದಾರರು ಈ ಅಪೀಲನ್ನು ಸಲ್ಲಿಸಿರುತ್ತಾರೆ.

5. ಅಪೀಲುದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳಾದ ಶ್ರೀಯುತ ಬಾಲಾಜಿ ಶ್ರೀನಿವಾಸನ್‌ರವರು ಪಕ್ಷಕಾರರ ವಿಧಿವತ್ತಾಗಿ ನಡೆದ ವಿವಾಹವಾಗಲೀ ಇಲ್ಲವೇ ಆಕೆಯ ಮುದುವೆಯಾಗಿ ಹೋದ ಅತ್ತೆ ಮನೆಯಾಗಲೀ ಬೆಂಗಳೂರಿನಲ್ಲಿಲ್ಲದ ಕಾರಣ ಗೃಹ ಸಂಬಂಧಿ ಹಿಂಸೆಯ ಅಧಿನಿಯಮದಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲು ಬೆಂಗಳೂರಿನಲ್ಲಿರುವ ಮ್ಯಾಜಿಸ್ಟ್ರೇಟರ ನ್ಯಾಯಾಲಯಕ್ಕೆ ಯಾವುದೇ ಅಧಿಕಾರ ವ್ಯಾಪ್ತಿಯಿರುವುದಿಲ್ಲವೆಂದು ವಾದಿಸಿರುತ್ತಾರೆ. ಮಾನ್ಯ ನ್ಯಾಯವಾದಿಗಳು, ಯಾವುದೇ ರೀತಿಯಲ್ಲೂ ಸಮರ್ಥನೀಯವಲ್ಲದಂಥ ಹುರುಳಿಲ್ಲದ ಆಪಾದನೆಗಳನ್ನು ಪತಿ ಅಪೀಲುದಾರ ಸಂಖ್ಯೆ: 14 ಇವರ ಮೇಲೆ ಹೊರಿಸಲಾಗಿರುತ್ತದೆಂದು ನಿವೇದಿಸಿಕೊಂಡಿರುತ್ತಾರೆ. ಮುಂದುವರೆದು, ಮಾನ್ಯ ನ್ಯಾಯವಾದಿಗಳು, ಪ್ರತ್ಯರ್ಜಿದಾರಳು ತನ್ನ ಪತಿಯ ಕುಟುಂಬದ ಸದಸ್ಯರೆಲ್ಲರಿಗೂ ಕಿರುಕುಳ ನೀಡುವ ಕಾರಣಕ್ಕಾಗಿಯೇ ರಾಜಾಸ್ಥಾನ, ಗುಜರಾತ್ ಹಾಗೂ ಚೆನ್ನೈನಲ್ಲಿನ ಇತರೆ ಸಂಬಂಧಿಕರನ್ನೂ ಒಳಗೊಂಡಂತೆ ತನ್ನ ಪತಿಯ ಕುಟುಂಬದ ಎಲ್ಲಾ ಸದಸ್ಯರನ್ನು

ಆಪಾದಿತರನ್ನಾಗಿಸಿ, ಫಿರ್ಯಾದುದಾರರು ನ್ಯಾಯಾಲಯದ ಪ್ರಕ್ರಿಯೆಯನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆಂದು ವಾದಿಸಿರುತ್ತಾರೆ.

6. ಪ್ರತ್ಯರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳಾದ ಶ್ರೀಮತಿ ನಿಧಿಯವರು, ಗೃಹ ಸಂಬಂಧಿ ಹಿಂಸೆಯ ಅಧಿನಿಯಮದ 27ನೇ ಪ್ರಕರಣದ ಬಲದಿಂದ, ಫಿರ್ಯಾದುದಾರರು ಖಾಯಂ ಆಗಿ ಅಥವಾ ತಾತ್ಕಾಲಿಕವಾಗಿ ವಾಸಿಸುವ ಅಥವಾ ವ್ಯವಹಾರ ನಡೆಸುವ ಸ್ಥಳದಲ್ಲೇ ಫಿರ್ಯಾದನ್ನು ಪುರಸ್ಕರಿಸುವ ಅಧಿಕಾರ ವ್ಯಾಪ್ತಿಯನ್ನು ನ್ಯಾಯಾಲಯವು ಹೊಂದಿರುತ್ತದೆಂದು ವಾದಿಸಿರುತ್ತಾರೆ. ಮುಂದುವರೆದು, ಪ್ರತ್ಯರ್ಜಿದಾರರು ಪ್ರಸ್ತುತ ಬೆಂಗಳೂರು ನಗರದ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್‌ನ ಪ್ರಾದೇಶಿಕ ವ್ಯಾಪ್ತಿಯಲ್ಲಿ ನೆಲೆಸಿದ್ದು, ಉಚ್ಚ ನ್ಯಾಯಾಲಯವು ಬೆಂಗಳೂರಿನ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಫಿರ್ಯಾದನ್ನು ಪುರಸ್ಕರಿಸುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತದೆಂದು ಸರಿಯಾಗಿಯೇ ಅಭಿಪ್ರಾಯಪಟ್ಟಿರುತ್ತದೆಂದೂ ನಿವೇದಿಸಿಕೊಂಡಿರುತ್ತಾರೆ. ಫಿರ್ಯಾದಿನಲ್ಲಿನ ದೃಢೋಕ್ತಿಗಳೆಡೆಗೆ ನಮ್ಮ ಗಮನವನ್ನು ಸೆಳೆಯುತ್ತಾ, ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಗೃಹ ಸಂಬಂಧಿ ಹಿಂಸೆಯ ವ್ಯಾಪ್ತಿಯಲ್ಲಿ ಬರುವಂಥ ಪತಿ – ಅಪೀಲುದಾರ ಸಂಖ್ಯೆ: 14 ಹಾಗೂ ಇತರೆ ಸಂಬಂಧಿಕರ ನಿರ್ದಿಷ್ಟವಾಗಿ ಪ್ರತ್ಯರ್ಜಿದಾರರ ಒಡವೆಗಳನ್ನು ಕಿತ್ತುಕೊಂಡು, ಆಸ್ತಿ ಖರೀದಿಸಿ ತರುವಂತೆ ಒತ್ತಾಯಸುತ್ತಿದ್ದ ಮಾವ – ಅತ್ತೆಯರಾದ ಆಪಾದಿತ ಸಂಖ್ಯೆ: 1 ಹಾಗೂ ಆಪಾದಿತ ಸಂಖ್ಯೆ: 2ರ ವಿರುದ್ಧದ ಹಲವಾರು ಘಟನೆಗಳನ್ನು ನಿವೇದಿಸಿರುತ್ತಾರೆ. ಮಾನ್ಯ ನ್ಯಾಯವಾದಿಗಳು, ಉಚ್ಚ ನ್ಯಾಯಾಲಯವು ಸಂಜ್ಞೇಯವನ್ನು ತೆಗೆದುಕೊಂಡ ಆದೇಶವನ್ನು ರದ್ದುಗೊಳಿಸಲು ಯುಕ್ತವಾಗಿಯೇ ನಿರಾಕರಿಸಿರುತ್ತದೆಂದೂ ವಾದಿಸಿರುತ್ತಾರೆ.

7. ನಾವು ವಾದಗಳನ್ನು ಎಚ್ಚರಿಕೆಯಿಂದ ಪರಿಗಣಿಸಿ, ದಾಖಲೆ ಮೇಲಿನ ಪ್ರಶ್ನಿತ ತೀರ್ಪು ಹಾಗೂ ಇತರೆ ವಸ್ತು ವಿಷಯಗಳನ್ನು ಪರಿಶೀಲಿಸಿರುತ್ತೇವೆ.

8. ಗೃಹ ಸಂಬಂಧಿ ಹಿಂಸೆಯ ಅಧಿನಿಯಮದ 18ನೇ ಪ್ರಕರಣವು ರಕ್ಷಣಾದೇಶಕ್ಕೆ ಸಂಬಂಧಿಸಿರುತ್ತದೆ. ಅಧಿನಿಯಮದ 18ನೇ ಪ್ರಕರಣದ ನಿರೂಪಣೆಯಲ್ಲಿ, ವಿಧಾನ ಮಂಡಲದ ಉದ್ದೇಶವು, ಮಹಿಳೆಗೆ ಹೆಚ್ಚಿನ ರಕ್ಷಣೆಯನ್ನು ಒದಗಿಸುವುದೇ ಆಗಿರುತ್ತದೆ. ಅಧಿನಿಯಮದ 20ನೇ ಪ್ರಕರಣವು, "ಬಾಧಿತ ವ್ಯಕ್ತಿ" ಗೆ ಹಣಕಾಸಿನ ಪರಿಹಾರವನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಆದೇಶಿಸಲು ನ್ಯಾಯಾಲಯಕ್ಕೆ ಅಧಿಕಾರವನ್ನು ನೀಡಿರುತ್ತದೆ. ಗೃಹ ಸಂಬಂಧಿ ಹಿಂಸೆಗಳ ಕೃತ್ಯಗಳನ್ನು ಆಪಾದಿಸಿದಾಗ, ನೋಟೀಸನ್ನು ನೀಡುವ ಮೊದಲೇ, ಅಲ್ಲಿ ಗೃಹ ಸಂಬಂಧಿ ಹಿಂಸೆಯ ಘಟನೆಗಳು ಜರುಗಿರುತ್ತವೆಂದು ನ್ಯಾಯಾಲಯಕ್ಕೆ ಮೊದಲ ನೋಟಕ್ಕೆ ಮನವರಿಕೆಯಾಗಿರಬೇಕಾಗಿರುತ್ತದೆ.

9. ಪ್ರಸ್ತುತ ಪ್ರಕರಣದಲ್ಲಿ, ಪ್ರತ್ಯರ್ಜಿದಾರರು 14ನೇ ಅಪೀಲುದಾರರ ವಿರುದ್ಧ ಗೃಹಸಂಬಂಧಿ ಹಿಂಸೆಗಳ ಆಪಾದನೆಯನ್ನು ಮಾಡಿರುತ್ತಾರೆ. ಅಪೀಲುದಾರ ಸಂಖ್ಯೆ: 14 ಪತಿಯಾಗಿದ್ದು, ಅಪೀಲುದಾರ ಸಂಖ್ಯೆ. 1 ಹಾಗೂ 2 ಪ್ರತ್ಯರ್ಜಿದಾರರ ಮಾವ ಹಾಗೂ ಅತ್ತೆಯವರಾಗಿರುತ್ತಾರೆ. ಅಪೀಲುದಾರ ಸಂಖ್ಯೆ: 3, 5, 9, 11 ಹಾಗೂ 12 ರವರುಗಳು ಪ್ರತ್ಯರ್ಜಿದಾರರ ಮಾವನ ಸಹೋದರರಾಗಿರುತ್ತಾರೆ. ಅಪೀಲುದಾರ ಸಂಖ್ಯೆ: 4, 6 ಹಾಗೂ 10 ರವರುಗಳು ಅನುಕ್ರಮವಾಗಿ ಅಪೀಲುದಾರ ಸಂಖ್ಯೆ: 3, 5 ಹಾಗೂ 9ರ ಪತ್ನಿಯರಾಗಿರುತ್ತಾರೆ. ಅಪೀಲುದಾರ ಸಂಖ್ಯೆ: 7 ಹಾಗೂ 8ರವರುಗಳು ಅಪೀಲುದಾರ ಸಂಖ್ಯೆ: 1 ತಂದೆ ತಾಯಿಯರುಗಳಾಗಿರುತ್ತಾರೆ. ಅಪೀಲುದಾರ ಸಂಖ್ಯೆ:1 ರಿಂದ 6 ಹಾಗೂ 14ರವರುಗಳು ಚೆನ್ನೈನ ನಿವಾಸಿಗಳಾಗಿರುತ್ತಾರೆ. ಅಪೀಲುದಾರ ಸಂಖ್ಯೆ: 7 ರಿಂದ 10 ರವರುಗಳು ರಾಜಾಸ್ಥಾನ ರಾಜ್ಯದ ನಿವಾಸಿಗಳಾಗಿದ್ದು, ಅಪೀಲುದಾರ ಸಂಖ್ಯೆ: 11 ಹಾಗೂ 13 ಗುಜರಾತ್ ರಾಜ್ಯದ ನಿವಾಸಿಗಳಾಗಿರುತ್ತಾರೆ. ಒಪ್ಪಿಕೊಂಡಂತೆ, ಪ್ರತ್ಯರ್ಜಿದಾರಳ ಅತ್ತೆ ಮನೆ ಹಾಗೂ ಅಪೀಲುದಾರ ಸಂಖ್ಯೆ: 1 ಇವರ ಮನೆ ಚೆನ್ನೈನಲ್ಲಿಯೇ ಇರುತ್ತದೆ. ಪ್ರತ್ಯರ್ಜಿದಾರರ ಪತಿ – ಅಪೀಲುದಾರ ಸಂಖ್ಯೆ: 14 ಹಾಗೂ ಮಾವ – ಅತ್ತೆಯರಾದ ಅಪೀಲುದಾರ ಸಂಖ್ಯೆ:1 ಹಾಗೂ 2 ರವರುಗಳ ಮಟ್ಟಿಗೆ, ವಿವಾಹದ ಸಮಯದಲ್ಲಿ ಪ್ರತ್ಯರ್ಜಿದಾರಳಿಗೆ ತನ್ನ ತಂದೆಯು ತನಗೆ ಉಡುಗೊರೆಯಾಗಿ ನೀಡಿದ್ದ ಒಡವೆಗಳನ್ನು

ಕಿತ್ತುಕೊಂಡಿರುವುದು ಹಾಗೂ ಪ್ರತ್ಯರ್ಜಿದಾರಳಿಗೆ ಹಿಂಸೆಯ ಆಪಾದಿತ ಕೃತ್ಯಗಳನ್ನು ಎಸಗಿರುತ್ತಾರೆಂದು ಆಪಾದಿಸುತ್ತಿರುವುದು ಆಪಾದಿತ ಗೃಹ ಸಂಬಂಧೀ ಹಿಂಸೆಯ ದೃಷ್ಟೋಕ್ತಿಗಳಾಗಿರುತ್ತವೆ. ಅಪೀಲುದಾರ ಸಂಖ್ಯೆ: 14ರ ಇತರೆ ಸಂಬಂಧಿಕರು ಹೇಗೆ ಗೃಹ ಸಂಬಂಧಿ ಹಿಂಸೆಯ ಕೃತ್ಯಗಳಿಗೆ ಕಾರಣರಾಗಿರುತ್ತಾರೆಂಬ ನಿರ್ದಿಷ್ಟ ಆಪಾದನೆಗಳಿರುವುದಿಲ್ಲ. ಅಲ್ಲದೆ, ಗುಜರಾತ್ ಹಾಗೂ ರಾಜಾಸ್ಥಾನ್‌ನಲ್ಲಿರುವಂಥ ಸಂಬಂಧಿಕರು ಪ್ರತ್ಯರ್ಜಿದಾರರಿಗೆ ಹಣಕಾಸಿನ ಪರಿಹಾರವನ್ನು ನೀಡಲು ಹೊಣೆಗಾರರಾಗಿರುತ್ತಾರೆಂದು ಏಕೆ ಹೇಳುತ್ತಿದ್ದಾರೆಂಬುದೂ ತಿಳಿದು ಬರುತ್ತಿಲ್ಲ. 3 ರಿಂದ 13ರ ವರೆಗಿನ ಇತರೆ ಅಪೀಲುದಾರರ ವಿರುದ್ಧ ಮೊದಲ ನೋಟಕ್ಕೆ ಅಪರಾಧ ಸಾಬೀತಾಗಿದೆಯೆಂದು ಉಚ್ಚ ನ್ಯಾಯಾಲಯವು ಹೇಳುತ್ತಿರುವುದು ಯುಕ್ತವಾಗಿರುವುದಿಲ್ಲ. ಅಪೀಲುದಾರ ಸಂಖ್ಯೆ: 3 ರಿಂದ 13ರ ವಿರುದ್ಧ ಯಾವುದೇ ನಿರ್ದಿಷ್ಟ ಆಪಾದನೆಗಳಿಲ್ಲದಿರುವುದರಿಂದ, ಅವರ ವಿರುದ್ಧದ ಗೃಹ ಸಂಬಂಧಿ ಹಿಂಸೆಯ ಕ್ರಿಮಿನಲ್ ಪ್ರಕರಣವನ್ನು ಮುಂದುವರಿಸಲಾಗುವುದಿಲ್ಲ ಹಾಗೂ ಇದನ್ನು ವಜಾಗೊಳಿಸಲು ತಕ್ಕದಾಗಿರುತ್ತದೆ.

10. ಬೆಂಗಳೂರು ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಉಚ್ಚ ನ್ಯಾಯಾಲಯವು ಎತ್ತಿ ಹಿಡಿದಂತೆ, ಗೃಹ ಸಂಬಂಧಿ ಹಿಂಸೆಯ ಅಧಿನಿಯಮದ 2005ರಿಂದ ಮಹಿಳೆಯರನ್ನು ರಕ್ಷಿಸುವ 27ನೇ ಪ್ರಕರಣವು ಕೆಲವು ಸಂದರ್ಭಗಳನ್ನು ಒಳಗೊಳ್ಳುತ್ತದೆ. ಅಧಿನಿಯಮದ 27ನೇ ಪ್ರಕರಣವನ್ನು ಈ ಮುಂದಿನಂತೆ ಓದಲಾಗಿರುತ್ತದೆ:

> **27. ಅಧಿಕಾರ ವ್ಯಾಪ್ತಿ**: *(1) ಯಾವ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನು ಅಥವಾ ಮಹಾನಗರ ಮ್ಯಾಜಿಸ್ಟ್ರೇಟನು ನ್ಯಾಯಾಲಯದ ಪ್ರಾದೇಶಿಕ ಮಿತಿಯೊಳಗೆ,–*
>
> *(ಎ) ಬಾಧಿತ ವ್ಯಕ್ತಿಯು ಖಾಯಂ ಆಗಿ ಅಥವಾ ತಾತ್ಕಾಲಿಕವಾಗಿ ವಾಸವಿರುವಲ್ಲಿ ಅಥವಾ ವ್ಯವಹಾರ ನಿರ್ವಹಿಸುತ್ತಿರುವಲ್ಲಿ ಅಥವಾ ನಿಯೋಜಿತನಾಗಿರುವಲ್ಲಿ; ಅಥವಾ*
>
> *(ಬಿ) ಎದುರುದಾರನು ವಾಸವಿರುವಲ್ಲಿ ಅಥವಾ ವ್ಯವಹಾರ ನಿರ್ವಹಿಸುತ್ತಿರುವಲ್ಲಿ ಅಥವಾ ನಿಯೋಜಿತನಾಗಿರುವಲ್ಲಿ; ಅಥವಾ*
>
> *(ಸಿ) ವ್ಯಾಜ್ಯ ಕಾರಣವು ಉದ್ಭವವಾಗಿರುವಲ್ಲಿ – ಆ ನ್ಯಾಯಾಲಯವು, ಸಂದರ್ಭಾನುಸಾರ, ಈ ಅಧಿನಿಯಮದ ಆದೇಶದ ಮೇರೆಗೆ ರಕ್ಷಣಾ ಆದೇಶವನ್ನು ಮತ್ತು ಇತರ ಆದೇಶಗಳನ್ನು ಮಂಜೂರು*

*ಮಾಡಲು ಮತ್ತು ಈ ಅಧಿನಿಯಮದ ಮೇರೆಗೆ ಅಪರಾಧಗಳ ಅಧಿವಿಚಾರಣೆ ಮಾಡಲು ಸಕ್ಷಮ ನ್ಯಾಯಾಲಯವಾಗಿರತಕ್ಕದ್ದು.*

*(2) ಈ ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ಆದೇಶವು, ಭಾರತದಾದ್ಯಂತ ಜಾರಿಗೊಳಿಸುವಂಥದ್ದು ಆಗಿರತಕ್ಕದ್ದು.*

ಮೇಲಿನ ಉಪಬಂಧದ ಸಾದಾ ಓದು, ಗೃಹ ಸಂಬಂಧಿ ಹಿಂಸೆಯ ಅಧಿನಿಯಮದಡಿಯಲ್ಲಿ, "ಬಾಧಿತ ವ್ಯಕ್ತಿ"ಯು ಖಾಯಂ ಆಗಿ ಅಥವಾ ತಾತ್ಕಾಲಿಕವಾಗಿ ನೆಲೆಸಿರುವ ಅಥವಾ ವ್ಯವಹಾರ ನಡೆಸುತ್ತಿರುವ ಅಥವಾ ಉದ್ಯೋಗಿಯಾಗಿರುವೆಡೆಗಳಲ್ಲಿನ ಸ್ಥಳದಲ್ಲಿಯೇ ಸಲ್ಲಿಸಬೇಕೆಂಬುದನ್ನು ಸ್ಪಷ್ಟಪಡಿಸುತ್ತದೆ. ಪ್ರಸ್ತುತ ಪ್ರಕರಣದಲ್ಲಿ, ಪ್ರತ್ಯರ್ಜಿದಾರಳು ಬೆಂಗಳೂರಿನ ಮೆಟ್ರೋ ಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಪ್ರಾದೇಶಿಕ ವ್ಯಾಪ್ತಿಯೊಳಗೆ ಬರುವ ತನ್ನ ತಂದೆ ತಾಯಿಯರೊಂದಿಗೆ ವಾಸಿಸುತ್ತಿರುತ್ತಾಳೆ. ಅಧಿನಿಯಮದ 27(1)(ಎ) ಪ್ರಕರಣದ ಹಿನ್ನೆಲೆಯಲ್ಲಿ ಬೆಂಗಳೂರಿನ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಫಿರ್ಯಾದನ್ನು ಪುರಸ್ಕರಿಸುವ ಹಾಗೂ ಅಪರಾಧವನ್ನು ಸಂಜ್ಞೇಯಕ್ಕೆ ತೆಗೆದುಕೊಳ್ಳುವ ಅಧಿಕಾರವ್ಯಾಪ್ತಿಯನ್ನು ಹೊಂದಿರುತ್ತದೆ. ಬೆಂಗಳೂರಿನಲ್ಲಿನ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದಂತೆ ಆಕ್ಷೇಪವನ್ನು ಎತ್ತಿರುವ ವಾದದಲ್ಲಿ ಯಾವುದೇ ಹುರುಳಿಲ್ಲ.

11. ಪರಿಣಾಮವಾಗಿ, ಸಂಖ್ಯೆ: 3 ರಿಂದ 13ರ ವರೆಗಿನ ಅಪೀಲುದಾರರ ಕ್ರಿಮಿನಲ್ ಸಂಕೀರ್ಣ ಅಪೀಲು ಸಂಖ್ಯೆ: 53/2015ನ್ನು ರದ್ದುಪಡಿಸಿ, ಈ ಅಪೀಲನ್ನು ಭಾಗಶಃ ಅಂಗೀಕರಿಸಿದೆ. ಬೆಂಗಳೂರಿನಲ್ಲಿನ ಮಾನ್ಯ VIನೇ ಹೆಚ್ಚುವರಿ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟರು ಅಪೀಲುದಾರ ಸಂಖ್ಯೆ:1, 2 ಹಾಗೂ 14ರ ವಿರುದ್ಧ ಕ್ರಿಮಿನಲ್ ಸಂಕೀರ್ಣ ಸಂಖ್ಯೆ: 53/2015ರನ್ನು ಮುಂದುವರೆಸಿ, ಕಾನೂನಿಗನುಸಾರವಾಗಿ ಸದರಿ ಮೊಕದ್ದಮೆಯನ್ನು ವಿಲೆ ಮಾಡತಕ್ಕದ್ದು. ವಿಷಯದ ಗುಣಾರ್ಹತೆಗಳ ಮೇಲೆ ನಾವು ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದಿಲ್ಲವೆಂಬುದನ್ನು ಇಲ್ಲಿ ಸ್ಪಷ್ಟಪಡಿಸುತ್ತೇವೆ.

----------------------------
( ಆರ್. ಭಾನುಮತಿ)
ನ್ಯಾಯಾಧೀಶರು

----------------------------
(ಎ.ಎಸ್. ಬೋಪಣ್ಣ)
ನ್ಯಾಯಾಧೀಶರು

----------------------------
(ಹೃಷಿಕೇಶ್ ರಾಯ್)
ನ್ಯಾಯಾಧೀಶರು

ನವದೆಹಲಿ,
22ನೇ ಜನವರಿ 2020.

## ಕ್ಲೇಮು ನಿರಾಕರಣೆ

"ಪ್ರಾದೇಶಿಕ ಭಾಷೆಗಳಲ್ಲಿ ಭಾಷಾಂತರಿಸಲಾದ ತೀರ್ಪುಗಳನ್ನು ಕಕ್ಷಿದಾರರ ಆಕೆಯ/ಆತನ ಸ್ಥಳೀಯ ಭಾಷೆಯಲ್ಲಿ ಅರ್ಥ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಮಾತ್ರ ಸೀಮಿತಗೊಳಿಸಲಾಗಿದೆ ಮತ್ತು ಇತರೆ ಯಾವುದೇ ಉದ್ದೇಶಕ್ಕೆ ಅವುಗಳನ್ನು ಬಳಸಿಕೊಳ್ಳುವಂತಿಲ್ಲ. ಎಲ್ಲ ಅಧಿಕೃತ ಹಾಗೂ ಕಚೇರಿ ಉದ್ದೇಶಗಳಿಗಾಗಿ, ಹಾಗೂ ಜಾರಿಗೊಳಿಸುವ ಮತ್ತು ಅನುಷ್ಠಾನಗೊಳಿಸುವುದಕ್ಕಾಗಿ" ತೀರ್ಪುಗಳ ಆಂಗ್ಲ ಭಾಷೆಯ ಆವೃತ್ತಿಯು ಅಧಿಕೃತವಾಗಿರತಕ್ಕದ್ದು."